**ಮಧ್ಯಂತರ ಅರ್ಜಿ ಮೇಲೆ ಆದ ಆದೇಶದ ಮೇರೆಗೆ ಸಾಕ್ಷಿಯನ್ನು ಈಹೊತ್ತು ದಿನಾಂಕ : 10.01.2020 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು .**

ಪಾಟೀ ಸವಾಲು : 2 ನೇ ಪ್ರತಿವಾದಿ ಪರ ಶ್ರೀ ಎಂ ಆರ್ ವಿ ವಕೀಲರಿಂದ :

ಶ್ರೀದೇವಿ ರವರಿಗೆ ದಾವಾ ಆಸ್ತಿ ಮಂಜೂರಾದ ಬಗ್ಗೆ ಮಂಜೂರಾತಿ ಪತ್ರ ನೋಡಿರುತ್ತೇನೆ . ಅದನ್ನು 4 ನೇ ಪ್ರತಿವಾದಿ ಸೊಸೈಟಿರವರು 1992 ರಲ್ಲಿ ಮಾಡಿರುತ್ತಾರೆ . ಲೇ ಔಟ್ ಪಾರಂ ಮಾಡಿದ್ದರು . ಬಿಡಿಎ ಅನುಮತಿ ಸಿಕ್ಕಿರುತ್ತದೆ . ನಿಪಿ 26 ದಾಖಲೆ ನೋಡುತ್ತಿದ್ದು ಅದನ್ನು ಸೊಸೈಟಿರವರು ಕೊಟ್ಟಿರುತ್ತಾರೆ . ಆದರೆ ಅದೇ ಪ್ಲಾನ್ ಕೊಟ್ಟಿರುತ್ತಾರೆ ಏನು ಗೊತ್ತಿಲ್ಲ. ಅದರಲ್ಲಿ ನಮ್ಮ ಸೈಟ್ ಸಂಖ್ಯೆ 84 ಎಂದು ಗುರುತಿಸಲಾಗಿದೆ ಎಂದರೆ ಸರಿ . ಅದರ ಮೇಲ್ ಭಾಗಕ್ಕೆ ಅಂದರೆ ಉತ್ತರಕ್ಕೆ ಖಾಲಿ ಜಾಗ ಕಾಣಿಸಲಾಗಿದೆ ಎಂದರೆ ಸರಿ . ದಕ್ಷಿಣಕ್ಕೆ ರಸ್ತೆ ಎಂದು ಕಾಣಿಸಲಾಗಿದೆ ಎಂದರೆ ಸರಿ . ಅದರಂತೆ ಪೂರ್ವಕ್ಕೆ ನಿವೇಶನ ಸಂಖ್ಯೆ 85 ನೇ ಸ್ವತ್ತು , ಪಶ್ಚಿಮಕ್ಕೆ ನಿವೇಶನ ಸಂಖ್ಯೆ 83 ಕಾಣಿಸಲಾಗಿದೆ ಎಂದರೆ ಸರಿ .

2. ನನ್ನ ದಾವೆಯಲ್ಲಿ ನಮ್ಮ ದಾವೆಯ ಪೂರ್ವಕ್ಕೆ ರಸ್ತೆ ಎಂದು ಹೇಳಿದ್ದೇನೆ ಎಂದರೆ ಸರಿ . ಪಶ್ಚಿಮಕ್ಕೆ ಸೈಟ್ ಸಂಖ್ಯೆ 91 ಎಂದು ಹೇಳಿರುತ್ತೇನೆ ಎಂದರೆ ಸರಿ . ಸೊಸೈಟಿರವರು ನನಗೆ ನಿವೇಶನ ಮಾರಾಟ ಮಾಡುವುದಕ್ಕಿಂತ ಮೊದಲು ಕೃಷಿ ಜಮೀನು ಇತ್ತು ಎಂದರೆ

ಸರಿ . ಸೊಸೈಟಿಯವರು 20 – 22 ಸರ್ವೆ ನಂಬರ್ ಗಳಲ್ಲಿ ಲೇ ಔಟ್ ಮಾಡಿರುತ್ತಾರೆ . ಮೇಲೆ ಹೇಳಿದ ಎಲ್ಲಾ ಸರ್ವೆ ನಂಬರ್ ಜಮೀನುಗಳ ನೋಟೀಫಿಕೇಷನ್ ನ್ನು ಮಾನ್ಯ ಉಚ್ಚ ನ್ಯಾಯಾಲಯದವರು ರದ್ದು ಮಾಡಿರುತ್ತಾರೆ ಎಂದರೆ ಸರಿ . ಸಾಕ್ಷಿಯು ಮೊದಲು ರದ್ದು ಮಾಡಿರುತ್ತಾರೆ ಎಂದು ಹೇಳುತ್ತಾರೆ . ಆ ಮೇಲೆ ಸೊಸೈಟಿಯವರು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿದರು ಎಂದರೆ ಸರಿ . ಸದರಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದವರು ಎತ್ತಿಹಿಡಿದಿರುತ್ತಾರೆ ಎಂದರೆ ಸರಿ .

3. ಮಾನ್ಯ ಸರ್ವೋಚ್ಚ ನ್ಯಾಯಾಲಯದವರು , ಸೊಸೈಟಿಯವರು ಪಡೆದಂತಹ ಜಮೀನುಗಳನ್ನು ಸಂಬಂಧಪಟ್ಟ ರೈತರಿಗೆ ವಾಪಸ್ಸು ಕೊಡಬೇಕೆಂದು ಆದೇಶ ಮಾಡಿರುತ್ತಾರೆ ಎಂದರೆ ಸರಿ . ರೈತರು ಪಡೆದಂತಹ ದುಡ್ಡನ್ನು ವಾಪಸ್ಸು ಕಟ್ಟಬೇಕೆಂದು ಕೂಡ ಹೇಳಿರುತ್ತಾರೆ ಎಂದರೆ ಸರಿ . ಆ ಕಾರಣಕ್ಕಾಗಿ ಸೊಸೈಟಿಯವರಿಗೆ ಸದರಿ ನಿವೇಶನಗಳನ್ನು ಮಾರಾಟ ಮಾಡಲು ಅಧಿಕಾರ ವಿರಲಿಲ್ಲ ಎಂದರೆ ಸರಿಯಲ್ಲ.

4. 2 ನೇ ಪ್ರತಿವಾದಿಯ ಮಾರಾಟಗಾರರು ಹಾಗೂ ಸರ್ವೆ ನಂಬರ್ 42/3 ಬಿ ಇದರ ಮಾಲೀಕರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು

ಸೊಸೈಟಿಯವರ ಅದರ ಮಾಲೀಕರು ಯಾರು ಎಂದು ಹೇಳಿರಲಿಲ್ಲ ಎಂದು ಹೇಳುತ್ತಾರೆ . ಸೊಸೈಟಿಯವರು ಸರ್ವೆ ನಂಬರ್ 42/3 ಬಿ ಜಮಿನನ್ನು ಸ್ವಾಧೀನ ಪಡೆದಿರಲಿಲ್ಲ ಎಂದರೆ ಸರಿಯಲ್ಲ.

5. ಸೊಸೈಟಿಯವರು ನಮಗೆ ಮಾರಾಟ ಮಾಡಿದಂತಹ ಶ್ರೀದೇವಿ ರವರ ಕ್ರಯಪತ್ರದಲ್ಲಿ ಮೇಲೆ ಸರ್ವೆ ನಂಬರ್ 42 ಎಂದು ಕಾಣಿಸಿರುತ್ತಾರೆ . ಆದರೆ ಸರ್ವೆ ನಂಬರ್ 42/3 ಬಿ ಎಂದು ಕಾಣಿಸಿಲ್ಲ ಎಂದರೆ ಸರಿ . 4 ನೇ ಪ್ರತಿವಾದಿ ಸೊಸೈಟಿರವರು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಎಲ್ ಎ ಓ ರವರಿಗೆ ರೈತರು ಜಮೀನನ್ನು ಅದರ ಮಾಲೀಕರಿಗೆ ವಾಪಸ್ಸು ಕೊಟ್ಟ ಬಗ್ಗೆ ಮುಚ್ಚಳಿಕೆ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಮೂಲ ಮಾಲೀಕರು ಕೂಡ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಸರ್ಕಾರಕ್ಕೆ ವಾಪಸ್ಸು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

6. ಬಿಡಿಎ ರವರು ಸೊಸೈಟಿರವರಿಗೆ ಯಾವುದೇ approved ಪ್ಲಾನ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾವು ಆಸ್ತಿ ಖರೀದಿ ಮಾಡುವಾಗ ಅಂದರೆ 1994 ರಲ್ಲಿ ಸದರಿ ಆಸ್ತಿಗೆ ಸಂಬಂಧಪಟ್ಟ ವ್ಯಾಜ್ಯಗಳು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದ್ದವು ಎಂದರೆ ನನಗೆ ಗೊತ್ತಿಲ್ಲ. ಆ ಕಾರಣಕ್ಕಾಗಿ ಸೊಸೈಟಿಯವರು ದಾವಾ ಆಸ್ತಿಯ ಸ್ವಾಧೀನವನ್ನು ನಮ್ಮ ಮಾರಾಟಗಾರರಿಗೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ.

ಕೇಸುಗಳು ನ್ಯಾಯಾಲಯದಲ್ಲಿ ಪೆಂಡಿಂಗ್ ಇದ್ದುದರಿಂದ ಸೊಸೈಟಿಯವರು ಸದರಿ ಆಸ್ತಿಗಳ ಅನುಭವವನ್ನು ಕೊಡಲು ಅಧಿಕಾರವಿರಲಿಲ್ಲ ಎಂದರೆ ಸರಿಯಲ್ಲ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇರೆಗೆ ಸೊಸೈಟಿಯವರು ಸದರಿ ನಿವೇಶನಗಳ ಮೇಲಿನ ಸಂಪೂರ್ಣ ಅಧಿಕಾರ ಕಳೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸೊಸೈಟಿಗೆ ಅಧಿಕಾರವಿಲ್ಲದೇ ಇದದ್ದಂತಹ ಆಸ್ತಿಯನ್ನು ನಾನು ಕೊಂಡುಕೊಂಡಿದ್ದರಿಂದ ನನಗೂ ಕೂಡ ದಾವಾ ಆಸ್ತಿಯ ಮೇಲೆ ಹಕ್ಕಿಲ್ಲ ಎಂದರೆ ಸರಿಯಲ್ಲ.

7. ಸೊಸೈಟಿಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಹಾಕಬೇಕಾದರೆ ನಮಗೆ ಮಾರಾಟ ಮಾಡಿದ ಆಸ್ತಿ ಯಾವ ಸರ್ವೆ ನಂಬರ್ ನಲ್ಲಿದೆ ಎಂದು ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಖರೀದಿಸಿದಂತಹ ದಾವಾ ನಿವೇಶನ ಸರ್ವೆ ನಂಬರ್ 42 ರಲ್ಲಿ ಬರುತ್ತದೆ . ಸೊಸೈಟಿಯವರು ಸರ್ವೆ ನಂಬರ್ 42/ಎ ನಲ್ಲಿ ನಮ್ಮ ಆಸ್ತಿ ಬರುತ್ತದೆ ಎಂದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮತ್ತು ಕಂದಾಯ ಇಲಾಖೆಯಲ್ಲಿ ಹೇಳಿಕೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ

OS 1797/2014
PW1

ಸೈಟ್ ಗೂ ಸರ್ವೆ ನಂಬರ್ 42/3 ಬಿ ಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ವಕೀಲರು ಹೆಚ್ಚಿನ ಪಾಟೀಸವಾಲಿಗೆ ಕಾಲವಕಾಶವನ್ನು ಕೋರಿದ್ದು , ವಿನಂತಿಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಮತ್ತು ಸ. ಇ

(ಸಿ ಡಿ ಕರೋಶಿ)
5 ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನ್ಯಾಯಾಂಗಣ 13, ಬೆಂಗಳೂರು ನಗರ .